**ಕರ್ನಾಟಕ ಸರ್ಕಾರ**

ಸಂಖ್ಯೆಪಪೂಶಿಇ/ಆಡಳಿತ-ಎ/ಉ.ವರ್ಗ01/2016-17

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-12
ದಿನಾಂಕಃ 29-05-2017.

## ಜ್ಞಾಪನ

ವಿಷಯಃ 2016-17 ನೇ ಸಾಲಿನಲ್ಲಿ ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆದ ಉಪನ್ಯಾಸಕರ ವರ್ಗಾವಣೆ ಕುರಿತು.

ಉಲ್ಲೇಖಃ 1. ಸರ್ಕಾರದ ಅಧಿಸೂಚನೆಃ ಸಂವ್ಯಶಾಇ 1 ಶಾಸನ 2007 ದಿನಾಂಕಃ 01-09-2007.
2. ಸರ್ಕಾರದ ಅಧಿಸೂಚನೆಃ ಇಡಿ 173 ಇಟಿಆರ್ 2007 ದಿನಾಂಕಃ 15-10-2007.
3. ಇಡಿ 37 ಇಟಿಆರ್ 2009 ದಿನಾಂಕಃ 23.04.2011 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ನಿಯಮಗಳು 2011.
4. ಈ ಕಛೇರಿ ಜ್ಞಾಪನ ದಿನಾಂಕ 12-05-2017.

-*-

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007 ರ ಅಧಿನಿಯಮ ಮತ್ತು ನಿಯಮಗಳನ್ವಯ 2016-17 ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ವರ್ಗಾವಣೆಯನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲಾಗಿದೆ. ಉಲ್ಲೇಖ-4ರ ಜ್ಞಾಪನದಲ್ಲಿ ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಿರುವ ಉಪನ್ಯಾಸಕರಿಗೆ ಮುಂದಿನ ಆದೇಶದವರೆಗೆ ವರ್ಗಾಯಿಸಿ ಆದೇಶಿಸಿದೆ. ಆದರೆ ಕೆಲವು ಉಪನ್ಯಾಸಕರು ಸ್ಥಳ ಆಯ್ಕೆ ಮಾಡಿಕೊಂಡು ವರ್ಗಾವಣೆಗೊಂಡಿರುವ ಸ್ಥಳಗಳನ್ನು ತಡೆಹಿಡಿಯಲಾಗಿತ್ತು. ಹಾಗೂ ಇಬ್ಬರು ಉಪನ್ಯಾಸಕರ ಹೆಸರುಗಳು ವರ್ಗಾವಣೆಯ ಪಟ್ಟಿಯಲ್ಲಿ ಬಿಟ್ಟುಹೋಗಿತ್ತು. ಪರಸ್ಪರ ವರ್ಗಾವಣೆಯಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಇಬ್ಬರು ಉಪನ್ಯಾಸಕರ ಹೆಸರುಗಳು ಹಾಗೂ ಸ್ಥಳಗಳು ಅದಲು ಬದಲು ಆಗಿದ್ದು, ಅದನ್ನು ಸರಿಪಡಿಸಿ ವರ್ಗಾವಣೆಯ ಆದೇಶವನ್ನು ಅನುಬಂದ-3 ಮತ್ತು 4 ರಲ್ಲಿ ನಮೂದಿಸಿದೆ. ವರ್ಗಾವಣೆಗೊಂಡ ಉಪನ್ಯಾಸಕರಿಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಆದೇಶಿಸಿದೆ.

### ಷರತ್ತುಗಳುಃ

1) ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಪಡೆದ ಉಪನ್ಯಾಸಕರನ್ನು ಕ ನಾ ಸೇ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007 ರ ನಿಯಮ 15 ರಂತೆ ಉಪನ್ಯಾಸಕರ ಸೇವಾ ವಿವರಗಳನ್ನು ಪರಿಶೀಲಿಸಿದ ತರುವಾಯ ವರ್ಗಾವಣೆ ಆದೇಶ ಸ್ವೀಕರಿಸಿದ 07 ದಿನದೊಳಗಾಗಿ ಕಡ್ಡಾಯವಾಗಿ ಕರ್ತವ್ಯದಿಂದ ಬಿಡುಗಡೆ ಮಾಡತಕ್ಕದ್ದು ಮತ್ತು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳತಕ್ಕದ್ದು.
2) ಉಪನ್ಯಾಸಕರ ವರ್ಗಾವಣೆಯು ಕೋರಿಕೆ ಮೇರೆಗೆ ಕೌನ್ಸೆಲಿಂಗ್ ಮೂಲಕ ಆಗಿರುವುದರಿಂದ ಯಾವುದೇ ವರ್ಗಾವಣೆಯನ್ನು ಮಾರ್ಪಾಡಿಸಲು ಅವಕಾಶವಿರುವುದಿಲ್ಲ ಮತ್ತು ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.

3) ವರ್ಗಾವಣೆ ಆದೇಶ ಪಡೆದ ಉಪನ್ಯಾಸಕರು ಸುಳ್ಳು ಮಾಹಿತಿ ನೀಡಿರುವುದು ಕಂಡುಬಂದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ವರ್ಗಾವಣೆ ಆದೇಶ ರದ್ದುಪಡಿಸಲಾಗುವುದು.

4) ಸದರಿ ವರ್ಗಾವಣೆಯು ಕೋರಿಕೆ ಮೇರೆಗೆ ಕೌನ್ಸೆಲಿಂಗ್ ಮೂಲಕ ಆಗಿರುವುದರಿಂದ ಯಾವುದೇ ಮುಂಗಡ / ಪ್ರಯಾಣ ಭತ್ಯೆ ಹಾಗೂ ಸೇರುವ ಕಾಲಕ್ಕೆ ಅರ್ಹರಾಗಿರುವುದಿಲ್ಲ.

5) ವರ್ಗಾವಣೆಗೊಂಡ ಉಪನ್ಯಾಸಕರನ್ನು ಕರ್ತವ್ಯದಿಂದ ಬಿಡುಗಡೆ ಮಾಡುವ ಮುನ್ನ ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರು ವರ್ಗಾವಣೆಗೊಂಡ ಉಪನ್ಯಾಸಕರ ಸೇವಾ ಪುಸ್ತಕವನ್ನು ಪರಿಶೀಲಿಸಿ ಖಾಯಂ ಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ದೃಢಪಡಿಸಿಕೊಂಡ ನಂತರವಷ್ಟೆ ಬಿಡುಗಡೆಗೊಳಿಸುವುದು.

6) ಉಪನ್ಯಾಸಕರು ಕರ್ತವ್ಯದಿಂದ ಬಿಡುಗಡೆ ಮಾಡಿದ ಹಾಗೂ ಕರ್ತವ್ಯಕ್ಕೆ ಹಾಜರಾದ ಬಗ್ಗೆ ವರದಿಯನ್ನು ಸಂಬಂದಪಟ್ಟ ಕಾಲೇಜಿನ ಪ್ರಾಂಶುಪಾಲರು *ವರ್ಗಾವಣೆ ಆದೇಶದಲ್ಲಿನ ಕ್ರಮಸಂಖ್ಯೆಯೊಂದಿಗೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012"* ಇವರ ವಿಳಾಸಕ್ಕೆ ತಪ್ಪದೇ ನೊಂದಾಯಿತ ಅಂಚೆ ಮೂಲಕ ಒಂದು ವಾರದೊಳಗೆ ಕಳುಹಿಸುವುದು."

7) ದಂಪತಿ ಪ್ರಕರಣದಡಿ ಮತ್ತು ಪರಸ್ಪರ ವರ್ಗಾವಣೆ ಪಡೆದ ವಿವರ ಕುರಿತು ಸದರಿಯವರುಗಳ ಸೇವಾ ಪುಸ್ತಕದಲ್ಲಿ ಈ ನಿಯಮಗಳು ಜಾರಿಗೆ ಬಂದ ನಂತರ ಪ್ರಥಮ ಬಾರಿಗೆ ದಂಪತಿ ಅಥವಾ ಪರಸ್ಪರ ಅಡಿಯಲ್ಲಿ ವರ್ಗಾವಣೆ ಪಡೆದಿರುತ್ತಾರೆಂದು ಕಡ್ಡಾಯವಾಗಿ ನಮೂದಿಸತಕ್ಕದ್ದು

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ.
2. ಸಂಬಂಧಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಅಂತರ್ಜಾಲದ ಮುಖಾಂತರ
3. ಸಂಬಂಧಪಟ್ಟ ಉಪನ್ಯಾಸಕರುಗಳಿಗೆ ಅಂತರ್ಜಾಲದ ಮುಖಾಂತರ
4. ಕಛೇರಿ ಪ್ರತಿ.

GOVERNMENT OF KARNATAKA
DEPARTMENT OF PRE-UNIVERSITY EDUCATION
LIST OF LECTURERS TRANSFERRED IN COUNCELLING DURING 2016-17
ANNEXURE TO MEMO NO:PAPUSHI/ADMIN-A/VARGA01/2016-17 DATED:04/11/2016

## ANNEXURE-3

| SL NO | NAME OF THE LECTURER TRANSFERRED FROM | SUBJECT | TRANSFERRED TO |
|---|---|---|---|
| 01 | H. K. GOPALASWAMY TT026-GOVT PU COLLEGE SAGAR BH ROAD SHIMOGA DT 577401 | 28-SOCIOLOGY | TT024 -GOVT PU COLLEGE KALLIHAL BHADRAVATHI TQ SHIMOGA DT 577233 |
| 02 | PRABHU V SAJJAN EE-244 –GOVT PU COLLEGE TALIKOTE MUDDEBIHAL TQ BIJAPUR DIST | 35-MATHEMATICS | EB130- GOVT PU COLLEGE FOR GIRLS GULEDGUDDA BADAMI TQ BAGALKOT DT 587203. |

Apporved by the Director,

Joint Director,
Dept.of PU Education,
18th Cross, Malleshwaram,
Bangalore- 560012.

GOVERNMENT OF KARNATAKA
DEPARTMENT OF PRE-UNIVERSITY EDUCATION
LIST OF LECTURERS TRANSFERRED IN COUNCELLING DURING 2016-17
ANNEXURE TO MEMO NO:PAPUSHI/ADMIN-A/VARGA01/2016-17 DATED:04/11/2016

## ANNEXURE-4

| SL NO | NAME OF THE LECTURER & COLLEGE DETAILS | TRANSFERRED TO | SUBJECT | NAME OF THE LECTURER & COLLEGE DETAILS | TRANSFERRED TO |
|---|---|---|---|---|---|
| 01 | MAHESH CHANDRA M N VV002- GOVT PU COLLEGE MADIKERI COORG DT 571201 | PP010- GOVT PU COLLEGE FOR GIRLS STONE BUILDING MANDYA 571401 | 41-COMPUTER-SCI | MANJULA PRIYADHARSHINI PP010- GOVT PU COLLEGE FOR GIRLS STONE BUILDING MANDYA 571401 | VV002- GOVT PU COLLEGE MADIKERI COORG DT 571201 |

Apporved by the Director,

Joint Director,
Dept.of PU Education,
18th Cross, Malleshwaram,
Bangalore- 560012.